ಸಂಖ್ಯೆ: ಇಸಿಇ/01/ಐ.ಐಎಂಎಲ್/01/2018

ಅಬಕಾರಿ ಆಯುಕ್ತರ ಕಛೇರಿ,
2ನೇ ಮಹಡಿ, ಟಿಟಿಎಂಸಿ ಕಟ್ಟಡ "ಎ" ಬ್ಲಾಕ್,
ಬಿಎಂಟಿಸಿ, ಶಾಂತಿನಗರ, ಬೆಂಗಳೂರು,
ದಿನಾಂಕ: 29-06-2018.

ಇವರಿಗೆ

ರಾಜ್ಯದ ಎಲ್ಲಾ ಅಬಕಾರಿ ಉಪ ಆಯುಕ್ತರುಗಳಿಗೆ

ಮಾನ್ಯರೆ,

ವಿಷಯ: 2018-19ನೇ ಸಾಲಿನ ವಿವಿಧ ಬಗೆಯ ಸನ್ನದುಗಳ ನವೀಕರಣದ ಕುರಿತು.

ಉಲ್ಲೇಖ: ಈ ಕಛೇರಿಯ ದಿನಾಂಕ: 15-06-2018, 20-06-2018, 21-06-2018, 23-06-2018, 25-06-2018, 26-06-2018 & 27-06-2018

** ** **

Http://parihara.karnataka.gov.in/service2/consolidatedrpt.aspx ಲಿಂಕ್‌ನಲ್ಲಿ ಅಬಕಾರಿ ಸನ್ನದುಗಳ ಪ್ರಸ್ತುತ ಹಂತವನ್ನು ಪರಿಶೀಲಿಸಬಹುದಾಗಿದೆ.

ಜಿಲ್ಲಾಧಿಕಾರಿಗಳು ಆನ್‌ಲೈನ್‌ನಲ್ಲಿ ಸನ್ನದುಗಳಿಗೆ ಅನುಮೋದನೆ ನೀಡುವ ಬಗೆಗಿನ ಮಾಡ್ಯೂಲ್ ಮತ್ತು ಡಿಜಿಟಲ್ ಸಹಿ ಸಿದ್ಧವಿದ್ದು, ಪರೀಕ್ಷಿಸಲಾಗುತ್ತಿದೆ. ಇದು ಬೃಹತ್(Bulk) ಮತ್ತು ವೈಯುಕ್ತಿಕ (Individual) ಸನ್ನದುಗಳಿಗೆ ಡಿಜಿಟಲ್ ಸಹಿ ಆಯ್ಕೆಯನ್ನು ಹೊಂದಿದೆ.

ಜಿಲ್ಲಾಧಿಕಾರಿಗಳು ನವೀಕರಣದ ಸಮಯದಲ್ಲಿ ವೈಯುಕ್ತಿಕ ಸನ್ನದುಗಳಿಗೆ ಯಾವುದೇ ಷರತ್ತುಗಳನ್ನು ಸೇರಿಸಬಹುದಾಗಿರುತ್ತದೆ. ಅಂತೆಯೇ ಅಬಕಾರಿ ಉಪ ಆಯುಕ್ತರು ಸಹ ವೈಯುಕ್ತಿಕ ಸನ್ನದುಗಳಿಗೆ ಯಾವುದೇ ಷರತ್ತುಗಳನ್ನು ಸೇರಿಸಬಹುದಾಗಿರುತ್ತದೆ.

ಆನ್‌ಲೈನ್ ವ್ಯವಸ್ಥೆಯ Paper trail ಗೆ ದಿನಾಂಕ: 27-06-2018 ರ ನನ್ನ ಪತ್ರವನ್ನು ಗಮನಿಸುವುದು.

ಕಳೆದ ವರ್ಷದ ಸನ್ನದಿನಲ್ಲಿ ಯಾವುದೇ ಬದಲಾವಣೆಗಳನ್ನು ಹೊಂದಿರದ ಪರವಾನಗಿಯನ್ನು ನವೀಕರಿಸುವ ಬಗ್ಗೆ ಈಗಾಗಲೇ ಕಳುಹಿಸಿರುವ ಸ್ವಯಂ ಘೋಷಣೆಯನ್ನು ಬಳಸಿ.

Excise Online Licence Renewal Software (EOLRS) ಆನ್‌ಲೈನ್ ಸಾಫ್ಟ್‌ವೇರ್‌ನ್ನು ಅಬಕಾರಿ ನಿರೀಕ್ಷಕರು ಮತ್ತು ಅಬಕಾರಿ ಉಪ ಅಧೀಕ್ಷಕರು Edit ಮಾಡಬಹುದಾದ ಆಯ್ಕೆ ಲಭ್ಯವಿರುವುದರಿಂದ, ಇದರ ಮುಖಾಂತರ ಸನ್ನದುದಾರರ ಹೆಸರು ಅಥವಾ ವಿಳಾಸದಲ್ಲಿ ಯಾವುದೇ ತಿದ್ದುಪಡಿ ಇದರೆ, ಅಬಕಾರಿ ನಿರೀಕ್ಷಕರು ಮತ್ತು ಅಬಕಾರಿ ಉಪ ಅಧೀಕ್ಷಕರು ಸದರಿ ತಿದ್ದುಪಡಿಯನ್ನು ಮಾಡಬಹುದಾಗಿದೆ. ಕೂಡಲೇ ಸಂಬಂಧಪಟ್ಟವರಿಗೆ ತಿಳಿಸಲು ಸೂಚಿಸಿದೆ.

Excise Online Licence Renewal Software (EOLRS) ಆನ್‌ಲೈನ್ ಸಾಫ್ಟ್‌ವೇರ್ ಜಿಲ್ಲಾಧಿಕಾರಿಗಳ ಲಾಗಿನ್‌ನಲ್ಲಿ ಅನುಮೋದನೆ (ವೈಯುಕ್ತಿಕವಾಗಿ ಮತ್ತು ಬೃಹತ್ ಎರಡೂ) ನೀಡುವ ಡಿಜಿಟಲ್ ಸಹಿ ದಿನಾಂಕ: 28-06-2018 ರ ಮಧ್ಯಾಹ್ನದಿಂದ ಚಾಲನೆಗೊಳಿಸಲಾಗಿದ್ದು, ಆನ್‌ಲೈನ್‌ನಲ್ಲಿ ಎಲ್ಲಾ ಸನ್ನದುಗಳ ನವೀಕರಿಸಲು ಮತ್ತು ವಿತರಿಸಲು ಅದನ್ನು ಬಳಸಬಹುದು.

Excise Online Licence Renewal Software (EOLRS) ಆನ್‌ಲೈನ್ ಸಾಫ್ಟ್‌ವೇರ್‌ನಲ್ಲಿ ಪ್ರಾರಂಭಿಕ ಸಮಸ್ಯೆಗಳನ್ನು ನಾವು ಮತ್ತು ನೀವು ಕಂಡಿರುತ್ತೇವೆ. ಈ ಬಗ್ಗೆ ಯಾವುದೇ ಆತಂಕಪಡಬೇಕಾದ ಅವಶ್ಯಕತೆಯಿರುವುದಿಲ್ಲ. ನನ್ನ ಮತ್ತು ಭೂಮಿ ಕನ್ಸಲ್ಟೆಂಟ್ ರವರುಗಳ ಬೆಂಬಲ ನಿಮ್ಮೊಂದಿಗಿರುತ್ತದೆ. ಎಂದು ತಿಳಿಸಲು ಇಚ್ಛಿಸುತ್ತೇನೆ. ಭೂಮಿ ಕನ್ಸಲ್‌ಟೆಂಟ್ ರವರುಗಳು ಅವರ ಕೆಲಸವನ್ನು ಮುಂದುವರೆಸುತ್ತಿದ್ದಾರೆ. ಜಿಲ್ಲಾಧಿಕಾರಿಗಳ ಲಾಗಿನ್ ಮತ್ತು ಇತರೆ ಸಮಸ್ಯೆಗಳ ಬಗ್ಗೆ ಭೂಮಿ ಕನ್ಸಲ್‌ಟೆಂಟ್‌ರವರು ನಿರ್ವಹಿಸುತ್ತಾರೆ.

ಹೊಸದಾಗಿ ಹೊರಹೊಮ್ಮಿದ Excise Online Licence Renewal Software (EOLRS) ವೆಬ್ ಆಧಾರಿತ ಆನ್‌ಲೈನ್ ನವೀಕರಣ ವ್ಯವಸ್ಥೆಯಲ್ಲಿ ಸನ್ನದುಗಳನ್ನು ನವೀಕರಿಸಲಾಗುತ್ತದೆ ಮತ್ತು ಡಿಜಿಟಲ್ ಸಹಿ ಮಾಡಲಾಗುತ್ತದೆ. 2018-19ನೇ ಸಾಲಿನ ನವೀಕರಣ ಶುಲ್ಕವನ್ನು ಪಾವತಿಸಿದ್ದು, ಅಸ್ತಿತ್ವದಲ್ಲಿರುವ ಮಾನ್ಯವಾದ ಮತ್ತು ಕ್ರಿಯಾತ್ಮಕ ಸನ್ನದುಗಳು ದಿನಾಂಕ: 01-07-2018 ರ ನಂತರ ಹಾಗೂ ದಿನಾಂಕ: 07-07-2018 ರ ಒಳಗೆ ನವೀಕರಣಗೊಂಡರೂ ಅಂತಹ ಸನ್ನದುಗಳನ್ನೂ ಸಹಾ ದಿನಾಂಕ: 01-07-2018 ರಂದು ನವೀಕರಣಗೊಂಡಿದೆ ಎಂದು ಪರಿಗಣಿಸುವುದು.

ತಮ್ಮ ವಿಶ್ವಾಸಿ,

ಅಬಕಾರಿ ಆಯುಕ್ತರು.

Scanned by CamScanner

ಸಂಖ್ಯೆ: ಇಸಿಇ/1/ಜ.ಐಎಂಎಲ್/2015-16

ಅಬಕಾರಿ ಆಯುಕ್ತರ ಕಛೇರಿ
2ನೇ ಮಹಡಿ, ಟಿ.ಟಿ.ಎಂ.ಸಿ ಕಟ್ಟಡ
"ಎ" ಬ್ಲಾಕ್, ಬಿ.ಎಂ.ಟಿ.ಸಿ, ಶಾಂತಿನಗರ
ಬೆಂಗಳೂರು, ದಿನಾಂಕ:15-05-2019.

**ಇವರಿಗೆ,**

ರಾಜ್ಯದ ಎಲ್ಲಾ ಜಿಲ್ಲೆಯ ಅಬಕಾರಿ ಉಪ ಆಯುಕ್ತರುಗಳಿಗೆ.

ಮಾನ್ಯರೆ,

**ವಿಷಯ:** 2019-20ನೇ ಸಾಲಿಗೆ ಆನ್‌ಲೈನ್ ಮುಖಾಂತರ ಭಾರತೀಯ ತಯಾರಿಕಾ ಮದ್ಯ ಮಾರಾಟದ ಸನ್ನದುಗಳ ನವೀಕರಣ ಮಾಡುವ ಬಗ್ಗೆ.

* * * * *

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, 2018-19 ನೇ ಸಾಲಿಗೆ ನೀಡಲಾದ ಅಬಕಾರಿ ಸನ್ನದುಗಳ ಚಾಲ್ತಿ ಅವಧಿ ದಿನಾಂಕ: 30-06-2019 ಕ್ಕೆ ಮುಕ್ತಾಯಗೊಳ್ಳಲಿದ್ದು, 2019-20ನೇ ಸಾಲಿಗೆ ಸನ್ನದುಗಳನ್ನು ದಿನಾಂಕ: 30-06-2019 ರ ಒಳಗೆ ನವೀಕರಿಸಿ ನೀಡಬೇಕಾಗಿರುತ್ತದೆ. ಕರ್ನಾಟಕ ಅಬಕಾರಿ (ಸ್ವದೇಶಿ ಮತ್ತು ವಿದೇಶಿ ಮದ್ಯ ಮಾರಾಟ) ನಿಯಮಗಳು, 1968 ರ ನಿಯಮ 5(ಎ)ಅನ್ವಯ ಮತ್ತು ಕರ್ನಾಟಕ ಅಬಕಾರಿ (ಲೀಸ್ ಆಫ್ ದಿ ರೈಟ್ ಆಫ್ ರೀಟೈಲ್ ವೆಂಡ್ ಆಫ್ ಬಿಯರ್) ನಿಯಮಗಳು, 1976 ರ ಅಡಿಯಲ್ಲಿ ನೀಡಿರುವ ಆರ್.ವಿ.ಬಿ.ಸನ್ನದುಗಳನ್ನು ನವೀಕರಿಸಲು ಜಿಲ್ಲೆಯ ಜಿಲ್ಲಾಧಿಕಾರಿಗಳು ಅಧಿಕಾರವುಳ್ಳವರಾಗಿರುತ್ತಾರೆ.

2019-20ನೇ ಸಾಲಿಗೆ ಆನ್‌ಲೈನ್ ಮುಖಾಂತರ ರಾಜ್ಯದಲ್ಲಿನ ಎಲ್ಲಾ ಭಾತಮ ಸನ್ನದುಗಳ ನವೀಕರಣ ಮಾಡುವುದು ಕಡ್ಡಾಯವಾಗಿರುತ್ತದೆ.

2019-20ನೇ ಸಾಲಿನಿಂದ ಸನ್ನದು ನವೀಕರಣದಲ್ಲಿ ಯಾವುದೇ ಬದಲಾವಣೆ ಇಲ್ಲದ ಸನ್ನದುಗಳಿಗೆ ಮಾತ್ರವೇ ಆನ್ ಲೈನ್ ಪದ್ಧತಿ ಅನ್ವಯಿಸುತ್ತದೆ. ಈ ಹಿನ್ನೆಲೆಯಲ್ಲಿ ಕೆಳಕಂಡ ನಿರ್ದೇಶನಗಳನ್ನು ನೀಡಲಾಗಿದೆ.

1.ಪ್ರತಿಯೊಬ್ಬ ಸನ್ನದುದಾರನಿಗೆ EOLRSನಲ್ಲಿ ಒಂದು login ಇದ್ದು, Login ID=KSBCL unique shop number ಆಗಿದ್ದು, Password= Licensee PAN ಸಂಖ್ಯೆಯಾಗಿರುತ್ತದೆ. ಸನ್ನದುದಾರರು ಅರ್ಜಿಯ ಜೊತೆಗೆ 25 ಅಂಶಗಳ ಮಾಹಿತಿಯನ್ನು ನಿರ್ದಿಷ್ಟ ನಮೂನೆಯಲ್ಲಿ ಸಲ್ಲಿಸಬೇಕು.

2.ಅರ್ಜಿದಾರರು ಸನ್ನದು ಶುಲ್ಕವನ್ನು ಆನ್‌ಲೈನ್ ಮುಖಾಂತರ ಖಜಾನೆಗೆ ಪಾವತಿಸಬಹುದು. ನಂತರ EOLRS ನಲ್ಲಿ ಚಲನ್ ಪ್ರತಿಯನ್ನು upload ಮಾಡಬೇಕು. ಖೊಟ್ಟಿ ಚಲನ್ (fake challan) ಗಳನ್ನು ಪತ್ತೆ ಮಾಡಲು ಖಜಾನೆ ಶೆಡ್ಯೂಲ್‌ನೊಂದಿಗೆ ಚಲನ್ ಸಂಖ್ಯೆಯನ್ನು ತಾಳೆ ಮಾಡಿ ದೃಢಪಡಿಸಿಕೊಳ್ಳುವುದು.

3.ಜಿಲ್ಲಾಧಿಕಾರಿಗಳು ಸನ್ನದನ್ನು ಅನುಮೋದಿಸಿ digital signature ಮುಖಾಂತರ ನವೀಕರಿಸುತ್ತಾರೆ. ನವೀಕರಣಗೊಂಡ ಸನ್ನದು ಪ್ರತಿಯನ್ನು EOLRS ಮುಖಾಂತರ ಪ್ರಿಂಟ್ ಪಡೆಯಬಹುದು.

Scanned by CamScanner

4.ಜಿಲ್ಲಾಧಿಕಾರಿಗಳಿಂದ ವಿಳಂಬವಾದಲ್ಲಿ ಅಬಕಾರಿ ಆಯುಕ್ತರು ಸನ್ನದು ನವೀಕರಣಕ್ಕೆ ಅನುಮೋದನೆ ನೀಡುತ್ತಾರೆ.

5.ಪ್ರತಿಯೊಬ್ಬ ಸನ್ನದುದಾರರಿಗೆ ಒಂದು ನವೀಕರಣದ ಕಡತವನ್ನು ತೆರೆದು ನಿರ್ವಹಿಸಬೇಕು (without waiting for manual application) ಸನ್ನದು ನವೀಕರಣ ಸಂಬಂಧ ಹಿಂದಿನ ಸಾಲುಗಳಿಗೆ ಸಂಬಂಧಿಸಿದಂತೆ ಸನ್ನದುದಾರರಿಂದ ಸರ್ಕಾರಕ್ಕೆ ಹಣ ಪಾವತಿಸಲು ಯಾವುದೇ ಬಾಕಿ ಇದ್ದಲ್ಲಿ. ಅಂತಹ ಬಾಕಿಯನ್ನು ಸಂದಾಯ ಮಾಡಿಸಿಕೊಂಡ ನಂತರ ನವೀಕರಣ ಮಾಡಲು ಕ್ರಮ ಕೈಗೊಳ್ಳುವುದು.

6.ಸನ್ನದುದಾರರಿಗೆ ಸಂಬಂಧಿಸಿದ ಎಲ್ಲಾ ಇಂದೀಕೃತ ಮಾಹಿತಿಯನ್ನು ಕಡತದಲ್ಲಿ ಮಂಡಿಸಬೇಕು (up-to-date) ಪ್ರಕರಣಗಳು (ಯಾವುದಾದರೂ ಇದ್ದಲ್ಲಿ) ದೂರು ಅರ್ಜಿಗಳು (ಯಾವುದಾದರೂ ಇದ್ದಲ್ಲಿ) ಇತ್ಯಾದಿ, ಅಂತಹ ಎಲ್ಲಾ ವಿಷಯಗಳನ್ನು ಅರ್ಹತೆ (merit ) ಆಧಾರದ ಮೇಲೆ ತೀರ್ಮಾನಿಸಬೇಕು. (ಈ ಪ್ರಕ್ರಿಯೆಯನ್ನು ಕೈಗೊಳ್ಳಲು ನವೀಕರಣದ ಅರ್ಜಿಯ ಅವಶ್ಯಕತೆ ಇಲ್ಲ). ಸಾರ್ವಜನಿಕರಿಂದ ಬರತಕ್ಕಂತಹ ದೂರು ಅರ್ಜಿಗಳೂ ಇತ್ಯಾದಿ ಸನ್ನದು ನವೀಕರಣದ ನಿರಾಕರಣೆಗೆ ಕಾರಣವಾಗಬಾರದು. ಸನ್ನದುದಾರರುಗಳ ನಡುವಿನ ವಿವಾದವು ಸನ್ನದು ನವೀಕರಣದ ನಿರಾಕರಣೆಗೆ ಕಾರಣವಾಗಬಾರದು.

7.ಪ್ರತಿಯೊಂದು ಸನ್ನದು ನವೀಕರಣದ ಕಡತವನ್ನು ಸಿದ್ಧಪಡಿಸಿಕೊಂಡು EOLRS ಮುಖಾಂತರ ಸನ್ನದು ನವೀಕರಣದ ಅರ್ಜಿ ಕಡತ ಮಾಡಿದ ಕೂಡಲೇ ಇತ್ಯರ್ಥಪಡಿಸಬೇಕು. ನವೀಕರಣದ ಅರ್ಜಿ ಬರುವವರೆಗೆ ಕಾಯುವ ಅವಶ್ಯಕತೆ ಇರುವುದಿಲ್ಲ.

8.EOLRS ಮುಖಾಂತರ ಸನ್ನದು ನವೀಕರಣದ ಅರ್ಜಿಗಳನ್ನು ತೀರ್ಮಾನಿಸಲು ಸನ್ನದು ವಾರು ಇತ್ಯರ್ಥವಾಗದೆ ಸರ್ಕಾರಕ್ಕೆ ರಾಜಸ್ವ ಬಾಕಿ ಇರುವ, ಬಾಕಿ ಮೊಕದ್ದಮೆ ಪ್ರಕರಣಗಳನ್ನು ಸಿದ್ಧಪಡಿಸಿ ಇಟ್ಟುಕೊಳ್ಳತಕ್ಕದ್ದು. ಅರ್ಜಿಗಳನ್ನು ಪರಿಶೀಲಿಸುವಾಗ ಯಾವುದೇ ವಿಳಂಬವನ್ನು ಮಾಡತಕ್ಕದ್ದಲ್ಲ.

9.ಆನ್‌ಲೈನ್ ಮುಖಾಂತರ 2018-19 ನೇ ಸಾಲಿಗೆ ನವೀಕರಣಗೊಂಡ ಮದ್ಯದ ಸನ್ನದುಗಳಲ್ಲಿ ವಿಳಾಸ ಮತ್ತು ಇತರೆ ಕೆಲವು ದಾಖಲಾತಿಗಳ ಮಾಹಿತಿಯನ್ನು ನಮೂದಿಸುವಲ್ಲಿ ಆಗಿರುವ ತಪ್ಪುಗಳನ್ನು EOLRS ತಂತ್ರಾಂಶದಲ್ಲಿ ಸರಿಪಡಿಸಿಕೊಂಡು, 2019-20ನೇ ಸಾಲಿಗೆ ನವೀಕರಿಸತಕ್ಕದ್ದು.

10.ಇತ್ಯರ್ಥವಾಗದೇ ಸರ್ಕಾರಕ್ಕೆ ರಾಜಸ್ವ ಬಾಕಿ ಉಳಿಸಿಕೊಂಡಿರುವ ಮತ್ತು ಬಾಕಿ ಇರುವ ಮೊಕದ್ದಮೆ ಪ್ರಕರಣಗಳಲ್ಲಿನ ಸನ್ನದುದಾರರುಗಳ ಪಟ್ಟಿಯನ್ನು ಅಬಕಾರಿ ಆಯುಕ್ತರಿಗೆ ಕಡ್ಡಾಯವಾಗಿ ಕಳುಹಿಸತಕ್ಕದ್ದು.

ತಮ್ಮ ವಿಶ್ವಾಸಿ,

ಅಬಕಾರಿ ಆಯುಕ್ತರು

**ಪ್ರತಿಯನ್ನು:-**

1. ಅಬಕಾರಿ ಜಂಟಿ ಆಯುಕ್ತರುಗಳು (ಜಾರಿ ಮತ್ತು ತನಿಖೆ) ರಾಜ್ಯದ ಎಲ್ಲಾ ವಿಭಾಗಗಳು/ರಾಜ್ಯ ವಿಚಕ್ಷಣ ದಳ, ಬೆಂಗಳೂರು ಇವರಿಗೆ ಮಾಹಿತಿಗಾಗಿ ಕಳುಹಿಸಿದೆ.
2. ರಾಜ್ಯದ ಎಲ್ಲಾ ಜಿಲ್ಲೆಗಳ ಜಿಲ್ಲಾಧಿಕಾರಿಗಳಿಗೆ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ.
3. ಕಛೇರಿ ಪ್ರತಿ/ಕಡತದ ಪ್ರತಿ.

Scanned by CamScanner